ಓ. ಎಸ್. ನಂಬರ:- 109/2023

ಡಿ.ಡಬ್ಲೂ-:-3 : ಬಸ್ಸಯ್ಯ ತಂದೆ ಗುರುಶಾಂತಯ್ಯ ಸೂಗಯ್ಯಗೋಳ

ದಿನಾಂಕ:- 18-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು : ಶ್ರೀ ಕೆ ಜಿ ಪಿ ವಕೀಲರಿಂದ.

ಮುರುಗಯ್ಯರವರ ಮನೆತನಕ್ಕೆ ಒಟ್ಟು ಎಷ್ಟು ಆಸ್ತಿ ಇತ್ತು ಎಂದು ನನಗೆ ಗೊತ್ತಿಲ್ಲ. ಮುರುಗಯ್ಯರವರಿಗೆ ಒಟ್ಟು ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ. ಮುರುಗಯ್ಯರವರ ಹೆಂಡತಿಯಾದ ಚೆನ್ನಬಸ್ಸಮ್ಮರವರಿಗೆ ಆಸ್ತಿಗಳು ಹೇಗೆ ಬಂದಿತ್ತು ಎಂದು ನಾನು ವಿಚಾರ ಮಾಡಿಲ್ಲ. ದಾವಾ ಆಸ್ತಿಗಳು ಒಟ್ಟು ಎಷ್ಟು ಎಕರೆ ಇದೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ೮ ಎಕರೆ ೧೨ ಗುಂಟೆ ಜಮೀನನ್ನು ಚೆನ್ನಬಸ್ಸಮ್ಮರವರು ತಮ್ಮ ೪ ಜನ ಹೆಣ್ಣು ಮಕ್ಕಳಿಗೆ ಮೃತ್ಯುಪತ್ರ ಮಾಡಿರುತ್ತಾರೆ ಎನ್ನತ್ತಾರೆ. ಮೃತ್ಯುಪತ್ರ ಮಾಡುವ ಸಮಯದಲ್ಲಿ ನಾನು ಹಾಜರಿರಲಿಲ್ಲ. ಮೃತ್ಯುಪತ್ರ ಯಾವ ದಿನಾಂಕದಂದು ಆಗಿದೆ ಎಂದು ನನಗೆ ಗೊತ್ತಿಲ್ಲ. ಮೃತ್ಯುಪತ್ರದ ಸಮಯದಲ್ಲಿ ಚೆನ್ನಬಸ್ಸಮ್ಮರವರ ಮಕ್ಕಳು ಯಾರು ಹಾಜರಿದ್ದರು ಎಂದು ನನಗೆ ಗೊತ್ತಿಲ್ಲ.

೨. ನಾನು ಉಮಾದೇವಿ, ಮಹಾದೇವಿ ಮತ್ತು ಕಸ್ತೂರಿಬಾಯಿ ಮತ್ತು ನೀಲಮ್ಮರವರಿಂದ ಜಮೀನು ಖರೀದಿ ಮಾಡಿರುತ್ತೇನೆ. ನಾನು ಸರ್ವೆ ನಂಬರ ೯೮/೨ ರಲ್ಲಿ ೨ ಎಕರೆ ೩ ಗುಂಟೆ ಮತ್ತು ಸರ್ವೆ ನಂಬರ ೯೮/೪ ರಲ್ಲಿ ೨ ಎಕರೆ ೩ ಗುಂಟೆ ಜಮೀನು ಮತ್ತು ಸರ್ವೆ ನಂಬರ ೯೮/೫ ರಲ್ಲಿ ೨ ಎಕರೆ ೩ ಗುಂಟೆ ಜಮೀನು ಮತ್ತು ಸರ್ವೆ ನಂಬರ ೯೮/೬ ರಲ್ಲಿ ೨ ಎಕರೆ ೩ ಗುಂಟೆ ಜಮೀನು

ಖರೀದಿ ಮಾಡಿರುತ್ತೇನೆ. ಖರೀದಿ ಮಾತುಕತೆ ಕಲಬುರಗಿಯಲ್ಲಿ ಮಾಡಿರುತ್ತೇವೆ. ೨ ಎಕರೆ ೩ ಗುಂಟೆ ಜಮೀನಿಗೆ ೬ ಲಕ್ಷದ ೧೩ ಸಾವಿರ ರೂಪಾಯಿ ಬೆಲೆ ನಿಗದಿಪಡಿಸಿ ಮಾತುಕತೆ ಮಾಡಿರುತ್ತೇವೆ. ದಾವಾ ಆಸ್ತಿಗಳು ಮೊದಲು ಮುರಗಯ್ಯರವರಿಂದ ಬಂದ ಆಸ್ತಿಗಳು ಆಗಿವೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮೃತ್ಯುಪತ್ರದ ಕಪ್ರಕಾರ ಆಸ್ತಿಗಳು ಬಂದ ಮೇರೆಗೆ ನಾನು ಖರೀದಿ ಮಾಡಿರುತ್ತೇನೆ ಎನ್ನುತ್ತಾರೆ.

೩. ನಾನು ಜಮೀನುಗಳನ್ನು ಖರೀದಿಸುವ ಮೊದಲು ಯಾವುದೆ ಕಾನೂನುಬದ್ದ ನೋಟಿಸನ್ನು ನೀಡಿರುವುದಿಲ್ಲ. ನಾನು ಖರೀದಿ ಪತ್ರ ಮಾಡುವ ಮೊದಲು ವಕೀಲರ ಅಭಿಪ್ರಾಯ ಪಡೆದಿರುತ್ತೇನೆ. ವಕೀಲರು ಸ್ವಾಧೀನ ಮತ್ತು ಮಾಲೀಕರು ಇರುವ ಮೇರೆಗೆ ಖರೀದಿ ಮಾಡಬಹುದು ಎಂದು ಹೇಳಿರುತ್ತಾರೆ. ವಕೀಲರ ಅಭಿಪ್ರಾಯದ ವರದಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ವಕೀಲರು ನನಗೆ ಲಿಖಿತವಾಗಿ ಅಭಿಪ್ರಾಯ ನೀಡಿರುವುದಿಲ್ಲ. ದಾವಾ ಆಸ್ತಿಗಳು ವಾದಿಯ ಪಿತ್ರಾರ್ಜಿತ ಆಸ್ತಿಗಳಾಗಿದ್ದು, ನಾನು ವಾದಿಯ ಕುಟುಂಬದ ಸದಸ್ಯರ ಸಮ್ಮತಿ ಪಡೆಯದೆ ಖೊಟ್ಟಿಯಾಗಿ ಖರೀದಿ ಪತ್ರಗಳನ್ನು ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಖರೀದಿ ಪತ್ರ ಮಾಡಿಕೊಳ್ಳುವಾಗ ವಾದಿಯ ಕುಟುಂಬದವರು ನಮಗೆ ಖರೀದಿ ಮಾಡಬೇಡಿ, ಅವು ಒಟ್ಟು ಕುಟುಂಬದ ಆಸ್ತಿಗಳು ಆಗಿರುತ್ತವೆ ಎಂದು ತಕರಾರು ಮಾಡಿದ್ದರು ಎಂದರೆ ಸರಿಯಲ್ಲ.

೪. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಏನು ವಿಷಯ ಬರೆದಿದೆ ಎಂದು ನನಗೆ ಗೊತ್ತು. ನನ್ನ ಪ್ರಮಾಣ ಪತ್ರದಲ್ಲಿ ಸರ್ವೆ ನಂಬರ ೯೮/೨, ೯೮/೪, ೯೮/೫ ಮತ್ತು ೯೮/೬ ಗಳ ಕುರಿತು ಬರೆಸಿರುತ್ತೇನೆ. ನಾನು ವಾದಿಯ ಹಕ್ಕು ಮುಳುಗಿಸುವ ಸಲುವಾಗಿ ಒಂದು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು : ೫ ರಿಂದ ೮ನೇ ಪ್ರತಿವಾದಿಗಳ ಪರ ಶ್ರೀಮತಿ ಎ ಟಿ ಡಿ ವಕೀಲರಿಂದ.

ಮೃತ್ಯು ಪತ್ರದ ಆಧಾರದಂತೆ ೫ ರಿಂದ ೮ನೇ ಪ್ರತಿವಾದಿಗಳು ಜಮೀನಿನ ಸ್ವಾಧೀನದಲ್ಲಿ ಇದ್ದರು ಮತ್ತು ಅದರ ಆಧಾರದ ಮೇಲೆ ನಾನು ಖರೀದಿ ಮಾಡಿರುತ್ತೇನೆ ಎಂದರೆ ಸರಿ. ನಾನು ೫ ರಿಂದ ೮ನೇ ಪ್ರತಿವಾದಿಗಳಿಗೆ ಹಣವನ್ನು ನೀಡಿ ಜಮೀನು ಖರೀದಿಮಾಡಿರುತ್ತೇನೆ ಎಂದರೆ ಸರಿ. ೫ ರಿಂದ ೮ನೇ ಪ್ರತಿವಾದಿಗಳು ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ ಹಾಜರಿದ್ದು, ನನಗೆ ಖರೀದಿ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ನಾನು ಖರೀದಿ ಮಾಡಿದಾಗಿನಿಂದ ಖರೀದಿ ಮಾಡಿದ ದಿನಾಂಕದಿಂದ ಜಮೀನುಗಳ ಸ್ವಾಧೀನದಲ್ಲಿ ನಾನೇ ಇರುತ್ತೇನೆ ಎಂದರೆ ಸರಿ.

ಮರು ವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,

ಅಫಜಲಪೂರ.